# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 324

ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ : 11.12.2024

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಈವರೆಗೆ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ ಎಷ್ಟು; ಒತ್ತುವರಿಯಾದ ಗೋಮಾಳಗಳನ್ನು ತೆರವುಗೊಳಿಸಲಾಗಿದೆಯೇ | ರಾಜ್ಯದಲ್ಲಿ ಈವರೆಗೆ ಒತ್ತುವರಿಯಾಗಿರುವ ಗೋಮಾಳದ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಸರ್ಕಾರ ಒತ್ತುವರಿದಾರರ ವಿರುದ್ಧ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿರುವವರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 192-ಎ ರಡಿ ನೋಟಿಸ್ ಜಾರಿ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗುತ್ತಿದೆ ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗುತ್ತದೆ. |
| ಇ) | ರಾಜ್ಯದ ಬಹುತೇಕ ತಾಲ್ಲೂಕು ಕಛೇರಿಗಳಲ್ಲಿ ರೈತರ RTCAಯಲ್ಲಿ ಬೆಲೆ ನೋಂದಣಿ, ಪಹಣಿ ನೋಂದಾವಣೆ, ಪಹಣಿ ತಿದ್ದುಪಡಿ ಮುಂತಾದ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 21 ಎಂಆರ್ಆರ್ 2024, ದಿನಾಂಕ: 24.01.2024ರನ್ವಯ ಪಹಣಿ ತಿದ್ದುಪಡಿ ಮಾಡುವ ಅಧಿಕಾರಿವನ್ನು ತಹಶೀಲ್ದಾರ್ ರವರಿಗೆ ನೀಡಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ. |
| ಈ) | ತಾಲ್ಲೂಕು ಹೋಬಳಿ ಕೇಂದ್ರಗಳ ವ್ಯಾಪ್ತಿಯಲ್ಲಿ ಜಮೀನು ಸರ್ವೆ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ ಬಗ್ಗೆ ಆರೋಪಗಳು ಕೇಳಿಬರುತ್ತಿದ್ದು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ಒದಗಿಸುವುದು) | ತಾಲ್ಲೂಕು ಹೋಬಳಿ ಕೇಂದ್ರಗಳ ವ್ಯಾಪ್ತಿಯಲ್ಲಿ ಜಮೀನಿನ ಸರ್ವೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ತಂತ್ರಾಂಶದಲ್ಲಿ ಸ್ವೀಕೃತವಾಗುತ್ತಿರುವ ಅರ್ಜಿಗಳನ್ನು ಜೇಷ್ಠತೆಯನುಸಾರ ಸರ್ವೇಯರ್‌ಗಳಿಗೆ ತಂತ್ರಾಂಶದಲ್ಲಿ ಹಂಚಿಕೆಯಾಗುತ್ತಿದ್ದು, ಅದರಂತೆ ಭೂ ಮಾಪಕರು ಸರ್ವೆ ಕಾರ್ಯ ಮಾಡಿ ಅರ್ಜಿಗಳನ್ನು ಇತ್ಯರ್ಥಪಡಿಸುತ್ತಿರುತ್ತಾರೆ ಹಾಗೂ ದರಖಾಸ್ತು ಮಂಜೂರಾತಿ ಜಮೀನುಗಳಿಗೆ ತಂತ್ರಾಂಶದಲ್ಲಿ 1-5 ತಯಾರಿಸುತ್ತಿದ್ದು, ಸದರಿ ಜಮೀನುಗಳನ್ನು ಪೋಡಿ ದುರಸ್ತಿ ಮಾಡಲು ದರಖಾಸ್ತು ಪೋಡಿ ಆಂದೋಲನ ನಡೆಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 108 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

LCQ 324

**ಅನುಬಂಧ-1**

<table>
<tr><th>ಕ್ರ ಸಂ</th><th>ಜಿಲ್ಲೆ</th><th>ವರದಿ</th></tr>
<tr><td>1</td><td>ಬಾಗಲಕೋಟೆ</td><td>ಜಿಲ್ಲೆಯಲ್ಲಿ 1547-22-05 ಎ/ಗು/ಆ ಜಮೀನು ಗೋಮಾಳ ಜಮೀನು ಒತ್ತುವರಿಯಾಗಿದ್ದು ಈ ಪೈಕಿ 1199-06 ಎ/ಗುವಿಸ್ತೀರ್ಣದ ಒತ್ತುವರಿ ತೆರವುಗೊಳಿಸಿ ವಶಕ್ಕೆ ಪಡೆಯಲಾಗಿದ್ದು ಒತ್ತುವರಿ ತೆರವುಗೊಳಿಸಲು ಬಾಕಿ 348-17 ಎ/ಗು ವಿಸ್ತೀರ್ಣ ವಿದ್ದು ಈ ಪೈಕಿ 182-00 ಎ/ಗು ವಿಸ್ತೀರ್ಣ ಭೂ ಕಬಳಿಕೆ ವಿಶೇಷ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಪ್ರಸ್ತುತ 166-17 ಎ/ಗು ವಿಸ್ತೀರ್ಣದ ಒತ್ತುವರಿ ತೆರವುಗೊಳಿಸಲು ಬಾಕಿ ಇರುತ್ತದೆಸದರಿ ಒತ್ತುವರಿದಾರರಿಗೆ ನೋಟೀಸ್ ನೀಡಿ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ</td></tr>
<tr><td>2</td><td>ಬೆಂಗಳೂರು ನಗರ</td><td>ಬೆಂಗಳೂರು ನಗರ ಜಿಲ್ಲೆಯಲ್ಲಿ ಗೋಮಾಳ ಜಮೀನಿನ ಒತ್ತುವರಿ ಪ್ರಕರಣಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತ್ತಿರುತ್ತದೆ.
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಒಟ್ಟು ಪ್ರಕರಣಗಳು</th></tr>
<tr><td>1</td><td>ಉತ್ತರ</td><td>262</td></tr>
<tr><td>2</td><td>ದಕ್ಷಿಣ</td><td>97</td></tr>
<tr><td>3</td><td>ಪೂರ್ವ</td><td>1302</td></tr>
<tr><td>4</td><td>ಯಲಹಂಕ</td><td>515</td></tr>
<tr><td>5</td><td>ಆನೇಕಲ್</td><td>920</td></tr>
<tr><td></td><td>ಒಟ್ಟು</td><td>3096</td></tr>
</table>
ಒತ್ತುವರಿಯಾಗಿರುವ ಗೋಮಾಳಗಳ ಪೈಕಿ ವಿವಾದ ಹಾಗೂ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಗೋಮಾಳದ ಒತ್ತುವರಿಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ.</td></tr>
<tr><td>3</td><td>ಬೆಂಗಳೂರು ಗ್ರಾಮಾಂತರ</td><td>ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈವರೆಗೆ ಒತ್ತುವರಿಯಾಗಿರುವ ಗೋಮಾಳ ಜಮೀನಿನ ಸಂಖ್ಯೆ ಕೆಳಗಿನಂತೆ ಇದೆ
<table>
<tr><th>ಕ್ರ.ಸ</th><th>ತಾಲ್ಲೂಕು</th><th>ಗೋಮಾಳ ಸಂಖ್ಯೆ</th></tr>
<tr><td>1</td><td>ದೇವನಹಳ್ಳಿ</td><td>303</td></tr>
<tr><td>2</td><td>ದೊಡ್ಡಬಳ್ಳಾಪುರ</td><td>2065</td></tr>
<tr><td>3</td><td>ಹೊಸಕೋಟೆ</td><td>3152</td></tr>
<tr><td>4</td><td>ನೆಲಮಂಗಲ</td><td>1456</td></tr>
<tr><td colspan="2">ಒಟ್ಟು</td><td>6976</td></tr>
</table></td></tr>
<tr><td>4</td><td>ಬೆಳಗಾವಿ</td><td>ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ 62 ಇದರ ಪೈಕಿ 48 ಗೋಮಾಳಗಳ ಕ್ಷೇತ್ರ 630ಎ-38ಗು ಕ್ಷೇತ್ರದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.</td></tr>
<tr><td>5</td><td>ಬಳ್ಳಾರಿ</td><td>ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 32.38 ಎಕರೆ ಜಮೀನು ಸರ್ಕಾರಿ ಗೋಮಾಳು ಜಮೀನು ಆಗಿದ್ದು, ಸರ್ಕಾರಿ ಜಮೀನಿನಲ್ಲಿ ಯಾವುದೇ ಒತುವರಿಯಾಗಿರುವುದಿಲ್ಲ</td></tr>
<tr><td>6</td><td>ಬೀದರ್</td><td>ಬೀದರ್ ಜಿಲ್ಲೆಯಲ್ಲಿ ಗೋಮಾಳ ಜಮೀನು ಒತ್ತುವರಿ ಪ್ರಕರಣಗಳು 49 ಇರುತ್ತವೆ. ಕ್ರಿಯಾ ಯೋಜನೆಯಂತೆ ಒತ್ತುವರಿಗಳು</td></tr>
<tr><td>7</td><td>ಚಾಮರಾಜನಗರ</td><td>ಗೋಮಾಳದ ಜಮೀನಿನ ಒತ್ತುವರಿ ವಿವರದ ಪ್ರತಿಯನ್ನು ಲಗತ್ತಿಸಿದೆ.<br>ಒತ್ತುವರಿಯಾಗಿರುವ ಜಮೀನು ನಮೂನೆ 50, 53 & 57 ರಲ್ಲಿ ಅರ್ಜಿ ಸಲ್ಲಿಸಿಕೊಂಡಿರುವ ಪ್ರಕರಣಗಳಾಗಿದ್ದು ದರಖಾಸ್ತು ಕಮಿಟಿಯಲ್ಲಿ ಇತ್ಯರ್ಥಗೊಳಿಸಿ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
</table>

<table>
<tr><td>8</td><td>ಚಿಕ್ಕಮಗಳೂರು</td><td>ಚಿಕಮಗಳೂರು ಜಿಲ್ಲೆಯಲ್ಲಿ ಈವರೆಗೆ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ 5435 ಪ್ರಕರಣಗಳಿದ್ದು, 4725-30 ಎಕರೆ ಒತ್ತುವರಿಯಾದ ಗೋಮಾಳಗಳನ್ನು ತೆರವುಗೊಳಿಸಲಾಗಿದೆ.</td></tr>
<tr><td>9</td><td>ಚಿಕ್ಕಬಳ್ಳಾಪುರ</td><td>ಜಿಲ್ಲೆಯಲ್ಲಿ ಒತ್ತುವರಿಯಾದ ಗೋಮಾಳಗಳ ಸಂಖ್ಯೆ ಈ ಕೆಳಕಂಡಂತಿದೆ
<table>
<tr><th>ಕ್ರ ಸ</th><th>ತಾಲ್ಲೂಕು</th><th>ಗೋಮಾಳಗಳ ಸಂಖ್ಯೆ</th></tr>
<tr><td>1</td><td>ಚಿಂತಾಮಣಿ</td><td>367</td></tr>
<tr><td>2</td><td>ಶಿಡ್ಲಘಟ್ಟ</td><td>418</td></tr>
<tr><td>3</td><td>ಚಿಕ್ಕಬಳ್ಳಾಪುರ</td><td>326</td></tr>
<tr><td>4</td><td>ಮಂಚೇನಹಳ್ಳಿ</td><td>98</td></tr>
<tr><td>5</td><td>ಗೌರಿಬಿದನೂರು</td><td>419</td></tr>
<tr><td>6</td><td>ಗುಡಿಬಂಡೆ</td><td>110</td></tr>
<tr><td>7</td><td>ಬಾಗೇಪಲ್ಲಿ</td><td>543</td></tr>
<tr><td>8</td><td>ಚೇಳೂರು</td><td>249</td></tr>
<tr><td></td><td>ಒಟ್ಟು</td><td>2530</td></tr>
</table>
ಮೇಲ್ಕಂಡ ಗೋಮಾಳ ಜಮೀನುಗಳಲ್ಲಿ ರೈತರು ನಮೂನೆ-50, 53 ಮತ್ತು 57 ರ ಅರ್ಜಿಗಳನ್ನು ಸಲ್ಲಿಸಿಕೊಂಡು ಅನುಭವದಲ್ಲಿದ್ದು, ಸದರಿ ಅರ್ಜಿಗಳನ್ನು ನಿಯಮಾನುಸಾರ ಬಗರ್ ಹುಕ್ಕುಂ ತಂತ್ರಾಂಶದಲ್ಲಿ ಇತ್ಯರ್ಥ ಪಡಿಸಿದ ನಂತರ ಅನರ್ಹ ಅರ್ಜಿಗಳನ್ನು ತಿರಸ್ಕರಿಸಿದ ನಂತರ ಒತ್ತುವರಿಯನ್ನು ತೆರವುಗೊಳಿಸಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರುಗಳಿಗೆ ಸೂಚಿಸಲಾಗುವುದು.</td></tr>
<tr><td>10</td><td>ಚಿತ್ರದುರ್ಗ</td><td>
<table>
<tr><th>ಕ್ರ.ಸ.</th><th>ತಾಲ್ಲೂಕು</th><th>ಒತ್ತುವರಿ ಗೋಮಾಳ ಜಮೀನುಗಳ ಸಂಖ್ಯೆ</th><th>ತೆರವುಗೊಳಿಸಿದ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಚಿತ್ರದುರ್ಗ</td><td>1314</td><td>0</td></tr>
<tr><td>2</td><td>ಚಳ್ಳಕೆರೆ</td><td>1336</td><td>540</td></tr>
<tr><td>3</td><td>ಹಿರಿಯೂರು</td><td>0</td><td>0</td></tr>
<tr><td>4</td><td>ಹೊಳಲ್ಕೆರೆ</td><td>0</td><td>0</td></tr>
<tr><td>5</td><td>ಹೊಸದುರ್ಗ</td><td>1530</td><td>0</td></tr>
<tr><td>6</td><td>ಮೊಳಕಾಲ್ಮೂರು</td><td>0</td><td>0</td></tr>
<tr><td colspan="2">ಒಟ್ಟು</td><td>4180</td><td>540</td></tr>
</table></td></tr>
<tr><td>11</td><td>ದಕ್ಷಿಣ ಕನ್ನಡ</td><td>ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ
<table>
<tr><th>ಕ್ರ.ಸ.</th><th>ತಾಲ್ಲೂಕು</th><th>ಒತ್ತುವರಿ ಗೋಮಾಳ ಸಂಖ್ಯೆ</th></tr>
<tr><td>1</td><td>ಮಂಗಳೂರು</td><td>0</td></tr>
<tr><td>2</td><td>ಮೂಡಬಿದ್ರೆ</td><td>38</td></tr>
<tr><td>3</td><td>ಮುಲ್ಕಿ</td><td>0</td></tr>
<tr><td>4</td><td>ಬಂಟ್ವಾಳ</td><td>56</td></tr>
<tr><td>5</td><td>ಉಳ್ಳಾಲ</td><td>0</td></tr>
<tr><td>6</td><td>ಕಡಬ</td><td>135</td></tr>
<tr><td>7</td><td>ಸುಳ್ಯ</td><td>0</td></tr>
<tr><td>8</td><td>ಬೆಳ್ತಂಗಡಿ</td><td>265</td></tr>
<tr><td>9</td><td>ಪುತ್ತೂರು</td><td>0</td></tr>
<tr><td colspan="2">ಒಟ್ಟು</td><td>494</td></tr>
</table>
ಒತ್ತುವರಿ ಜಮೀನಿಗೆ ಅಕ್ರಮ ಸಕ್ರಮ ಅರ್ಜಿ ಬಾಕಿಯಿರುವುದರಿಂದ ಒತ್ತುವರಿ ತೆರವುಗೊಳಿಸಿರುವುದಿಲ್ಲ.</td></tr>
<tr><td>12</td><td>ದಾವಣಗೆರೆ</td><td>ದಾವಣಗೆರೆ ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ: 384-ಹೌದು</td></tr>
<tr><td>13</td><td>ಧಾರವಾಡ</td><td>ಜಿಲ್ಲೆಯಲ್ಲಿ ಒಟ್ಟು 3586-17 (ಎ-ಗು) ಗೋಮಾಳ ಜಮೀನು ಒತ್ತುವರಿಯಾದ ಪೈಕಿ 3309-06 (ಎ-ಗು) ಜಮೀನು ತೆರವುಗೊಳಿಸಲಾಗಿದೆ.</td></tr>
</table>

<table>
<tr><td>14</td><td>ಗದಗ</td><td>ಗದಗ ಜಿಲ್ಲೆಯಲ್ಲಿ ಒಟ್ಟು 51ಎ-15ಗುಂ ಗೋಮಾಳ ಜಮೀನು ಒತ್ತುವರಿಯಾಗಿರುತ್ತದೆ. ಈ ಪೈಕಿ ಕ್ಷೇತ್ರ 01ಎ-32ಗುಂ ಗೋಮಾಳ ಜಮೀನಿನ ಒತ್ತುವರಿಯನು ತೆರವುಗೊಳಿಸಲಾಗಿರುತ್ತದೆ</td></tr>
<tr><td>15</td><td>ಹಾಸನ</td><td>ಜಿಲ್ಲೆಯಲ್ಲಿ ಒಟ್ಟು 74737-07 ಎಕರೆ ಜಮೀನು ಒತ್ತುವರಿಯಾಗಿರುತ್ತದೆ. ಈ ಪೈಕಿ 3323-13 ಎಕರೆ ಸರ್ಕಾರಿ ಜಮೀನಿನ ಒತ್ತುವರಿ ತೆರವುಗೊಳಿಸಲಾಗಿರುತ್ತದೆ.</td></tr>
<tr><td>16</td><td>ಹಾವೇರಿ</td><td>ಜಿಲ್ಲೆಯಲ್ಲಿ ಈವರೆಗೆ 8013 ಎ-32ಗುಂ ಗೋಮಾಳ ಜಮೀನು ಒತ್ತುವರಿಯಾಗಿದ್ದು, 78911 ಎ -27 ಗುಂ ಜಮೀನನ್ನು ತೆರವುಗೊಳಿಸಲಾಗಿರುತ್ತದೆ. ಬಾಕಿ 122ಎ-05ಗುಂ ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು ಅಂತಿಮ ಆದೇಶವಾದ ನಂತರ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುವುದು.</td></tr>
<tr><td>17</td><td>ಕಲಬುರಗಿ</td><td>ಕಲಬುರಗಿ ಜಿಲ್ಲೆಯಲ್ಲಿ ಸರಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕೆ.ಪಿ.ಎಲ್.ಸಿ. ನಿರ್ದೇಶನದಂತೆ ಒತ್ತುವರಿ ತೆರವುಗೊಳಿಸಲು ತಹಸೀಲ್ದಾರ ಮತ್ತು ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಲಾಗಿರುತ್ತದೆ. ಒತ್ತುವರಿ ಮಾಡಿಕೊಂಡಿರುವ ಸರಕಾರಿ ಜಮೀನುಗಳ ಮಾಹಿತಿ ಪ್ರತಿ ಲಗತ್ತಿಸಿದೆ.</td></tr>
<tr><td>18</td><td>ಕೊಡಗು</td><td>ಜಿಲ್ಲೆಯಲ್ಲಿ 58 ಗೋಮಾಳಗಳು ಒತ್ತುವರಿಯಾಗಿದ್ದು, 1 ಗೋಮಾಳದ ಒತ್ತುವರಿ ತೆರವು ಆಗಿದೆ. ಉಳಿದ ಗೋಮಾಳಗಳು ತೆರವು ಆಗಿರುವುದಿಲ್ಲ.</td></tr>
<tr><td>19</td><td>ಕೋಲಾರ</td><td>ಜಿಲ್ಲೆಯಲ್ಲಿ ಒಟ್ಟು ಗೋಮಾಳಗಳ ಸಂಖ್ಯೆ:4682 ಇದ್ದು, 4682 ಗೋಮಾಳ ಜಮೀನು ಒತ್ತುವರಿಯಾಗಿರುತ್ತದೆ. ಸದರಿ ಗೋಮಾಳ ಜಮೀನಿಗೆ ಭೂ ಸಕ್ರಮೀಕರಣ ಕೋರಿ ಅರ್ಜಿದಾರರು ನಮೂನೆ-53, 57 ಅನ್ನು ಸಲ್ಲಿಸಿದ್ದು, ಸದರಿ ಅರ್ಜಿಗಳು ಸಮಿತಿಯಲ್ಲಿ ಮಂಡಿಸಿದ ನಂತರ ತಿರಸ್ಕøತ ಅರ್ಜಿಗಳ ಒತ್ತುವರಿಯನ್ನು ತೆರವುಗೊಳಿಸಲು ನಿಯಮನುಸಾರ ಕ್ರಮ ಕೈಗೊಳ್ಳಲಾಗುತ್ತದೆ.</td></tr>
<tr><td>20</td><td>ಕೊಪ್ಪಳ</td><td>ಜಿಲ್ಲೆಯಲ್ಲಿ ಗೋಮಾಳ ಒತ್ತುವರಿ ಪ್ರಕರಣಗಳು ಕಂಡುಬಂದಿರುವುದಿಲ್ಲ.</td></tr>
<tr><td>21</td><td>ಮಂಡ್ಯ</td><td>ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳ ಸಂಖ್ಯೆ: 1956 ಇದ್ದು ಒತ್ತುವರಿಯಾದ ಗೋಮಾಳಗಳನ್ನು ಸರ್ಕಾರದ ಸುತ್ತೋಲೆಗಳ ನಿರ್ದೇಶನಗಳಂತೆ ತೆರವು ಮಾಡಲು ಕ್ರಮ ವಹಿಸಲಾಗುತ್ತಿದೆ.</td></tr>
<tr><td>22</td><td>ಮೈಸೂರು</td><td>ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 18861-27.08 ಎಕರೆ ಗೋಮಾಳ ಜಮೀನು ಒತ್ತುವರಿಯಾಗಿದ್ದು, ಒತ್ತುವರಿಯಾಗಿರುವ ಜಮೀನು ನಮೂನೆ 50, 53 & 57ರಲ್ಲಿ ಅರ್ಜಿ ಸಲ್ಲಿಸಿಕೊಂಡಿರುವ ಪ್ರಕರಣಗಳಾಗಿದ್ದು, ದರಖಾಸ್ತು ಕಮಿಟಿಯಲ್ಲಿ ಇತ್ಯರ್ಥಗೊಳಿಸಿ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ.</td></tr>
<tr><td>23</td><td>ರಾಯಚೂರು</td><td>ಜಿಲ್ಲೆಯಲ್ಲಿ ಗೋಮಾಳ ಜಮೀನು ಒತ್ತುವರಿಯಾಗಿರುವುದಿಲ್ಲ.</td></tr>
<tr><td>24</td><td>ರಾಮನಗರ</td><td>ರಾಮನಗರ ಜಿಲ್ಲೆಯಲ್ಲಿ ಒಟ್ಟು 12800-01 ಎ/ಗುಂ ಒತ್ತುವರಿಯಾಗಿರುವ ಗೋಮಾಳದ ಜಮೀನಾಗಿದ್ದು, ಒತ್ತುವರಿಯಾದ ಗೋಮಾಳಗಳನ್ನು ತೆರವುಗೊಳಿಸಲಾಗಿರುವುದಿಲ್ಲ</td></tr>
<tr><td>25</td><td>ಶಿವಮೊಗ್ಗ</td><td>ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 4134 ಎಕರೆ 38 ಗುಂಟೆ ವಿಸ್ತೀರ್ಣ ಒತ್ತುವರಿಯಾಗಿರುತ್ತದೆ, ಹಾಗೂ ಅತಿಕ್ರಮಣಗೊಂಡಿರುವ ಜಮೀನಿನ ಪೈಕಿ ಈಗಾಗಲೇ ಅತಿಕ್ರಮಣದಾರರು ಭೂ ಮಂಜೂರಾತಿ ಸಂಬಂಧ ನಮೂನೆ 53 ಹಾಗೂ 57 ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇತ್ಯರ್ಥಕ್ಕೆ ಬಾಕಿ ಇರುತ್ತದೆ, ಸದರಿ ಅರ್ಜಿಗಳಲ್ಲಿ ಅನರ್ಹ ಅರ್ಜಿಗಳನ್ನು ವಿಲೇಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಹಾಗೂ ಕೆಲವು ಪ್ರಕರಣಗಳಲ್ಲಿ ಅತಿಕ್ರಮಣದಾರರು ಸಂಬಂಧಪಟ್ಟ ತಹಶೀಲ್ದಾರ್ ರವರು ನೀಡಿರುವ ತಿಳುವಳಿಕೆಯನ್ನು ಪ್ರಶ್ನಿಸಿ ವಿವಿಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು ವಿಚಾರಣಾ ಹಂತದಲ್ಲಿ ಇರುತ್ತದೆ. ಉಳಿಕೆ ಪ್ರಕರಣಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಪರಿಶೀಲಿಸಿ ತಹಶೀಲ್ದಾರ್ ರವರ ಹಂತದಲ್ಲಿ ಕ್ರಮ ವಹಿಸಲಾಗಿರುತ್ತದೆ.</td></tr>
<tr><td>26</td><td>ತುಮಕೂರು</td><td>ತುಮಕೂರು ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ 560, ಈ ಪೈಕಿ 403 ಒತ್ತುವರಿಯಾದ ಗೋಮಾಳಗಳನ್ನು ಹಿಂಪಡೆಯಲಾಗಿದೆ. ಒತ್ತುವರಿದಾರರ ವಿರುದ್ಧ ಭೂ ಕಬಳಿಕೆ ವಿಶೇಷ ನ್ಯಾಯಾಲಯಕ್ಕೆ 403 ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ.</td></tr>
<tr><td>27</td><td>ಉಡುಪಿ</td><td>ಉಡುಪಿ ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳಗಳ ಸಂಖ್ಯೆ:
<table>
<tr><td>ಕ್ರ.ಸ</td><td>ತಾಲ್ಲೂಕು</td><td>ಒತ್ತುವರಿಯಾದ ಗೋಮಾಳ ಸಂಖ್ಯೆ</td></tr>
<tr><td>1</td><td>ಕುಂದಾಪುರ</td><td>139</td></tr>
</table>
</td></tr>
</table>

<table>
<tr><td></td><td></td><td>
<table>
<tr><td>2</td><td>ಉಡುಪಿ</td><td>22</td></tr>
<tr><td>3</td><td>ಕಾರ್ಕಳ</td><td>102</td></tr>
<tr><td>4</td><td>ಬ್ರಹ್ಮಾವರ</td><td>0</td></tr>
<tr><td>5</td><td>ಬೈಂದೂರು</td><td>0</td></tr>
<tr><td>6</td><td>ಕಾಪು</td><td>47</td></tr>
<tr><td>7</td><td>ಹೆಬ್ರಿ</td><td>0</td></tr>
<tr><td colspan="2">ಒಟ್ಟು</td><td>310</td></tr>
</table>
ಒತ್ತುವರಿದಾರರು ನಮೂನೆ 50,53,57,94 ಸಿ, 94 ಸಿಸಿ ರಡಿ ಅರ್ಜಿ ಸಲ್ಲಿಸಿದ್ದು, ತನಿಖಾ ಹಂತದಲ್ಲಿರುತ್ತದೆ, ಈ ಹಂತದಲ್ಲಿ ಯಾವುದೇ ಕ್ರಮ ಕೈಗೊಳ್ಳಲಾಗಿರುವುದಿಲ್ಲ.</td></tr>
<tr><td>28</td><td>ಉತ್ತರ ಕನ್ನಡ</td><td>ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟೂ 151-13-15 ಎಕರೆ ಗೋಮಾಳ ಜಮೀನು ಒತ್ತುವರಿಯಾಗಿದ್ದು ಈ ಪೈಕಿ 81-1-1 ಒತ್ತುವರಿ ಕುರಿತು ಭೂಕಬಳಿಕೆ ನಿಷೇಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದ್ದು 70-12-14 ಕ್ಷೇತ್ರ ಒತ್ತುವರಿ ತೆರವುಗೊಳಿಸಲು ಬಾಕಿ ಇರುತ್ತದೆ.</td></tr>
<tr><td>29</td><td>ವಿಜಯನಗರ</td><td>ವಿಜಯನಗರ ಜಿಲ್ಲೆಯಲ್ಲಿ ಕೂಡ್ಲಿಗಿ ತಾಲ್ಲೂಕಿನ ಕೊಂಬಳಿ ಗ್ರಾಮದ ಸರ್ವೆ ನಂಬರ್ 129 ವಿ:3-85 ಎಕರೆ ಸರ್ಕಾರ ಗೋಮಾಳ ಜಮೀನು ಒತ್ತವರಿಯಾಗಿದ್ದು, ನಿಯಮಾನುಸಾರ ಒತ್ತವರಿದಾರರಿಗೆ ನೋಟೀಸ್ ನೀಡಿ ಒತ್ತುವರಿ ತೆರವುಗೊಳಿಸಲು ಸರ್ಕಾರದ ಸುತ್ತೋಲೆಗಳ ಪ್ರಕಾರ ಕ್ರಮವಹಿಸಲಾಗುತ್ತಿದೆ.</td></tr>
<tr><td>30</td><td>ವಿಜಯಪುರ</td><td>ವಿಜಯಪುರ ಜಿಲ್ಲೆಯಲ್ಲಿ ಒಟ್ಟು 2402 ಪ್ರಕರಣಗಳು 1050ಎ-26ಗು ಗೋಮಾಳ ಜಮೀನು ಒತ್ತುವರಿಯಾಗಿರುತ್ತದೆ.</td></tr>
<tr><td>31</td><td>ಯಾದಗಿರಿ</td><td>ಯಾದಗಿರಿ ಜಿಲ್ಲೆಯಲ್ಲಿ ಒತ್ತುವರಿಯಾಗಿರುವ ಗೋಮಾಳಗಳ ವಿವರ ಈ ಕೆಳಗಿನಂತಿವೆ.
<table>
<tr><th>ಕ್ರ.ಸ.</th><th>ತಾಲ್ಲೂಕಿನ ಹೆಸರು</th><th>ಒತ್ತುವರಿಯಾದ</th></tr>
<tr><td>1</td><td>ಯಾದಗಿರಿ</td><td>81</td></tr>
<tr><td>2</td><td>ಶಹಾಪೂರ</td><td>158</td></tr>
<tr><td>3</td><td>ಸುರಪುರ</td><td>31</td></tr>
<tr><td>4</td><td>ಗುರುಮಠಕಲ್</td><td>69</td></tr>
<tr><td>5</td><td>ವಡಗೇರಾ</td><td>0</td></tr>
<tr><td>6</td><td>ಹುಣಸಗಿ</td><td>50</td></tr>
<tr><td colspan="2">ಒಟ್ಟು</td><td>389</td></tr>
</table>
ಮಾನ್ಯ ಸರ್ಕಾರದ ಸುತ್ತೋಲೆ ಸಂಖ್ಯೆ/ಆರ್.ಡಿ/20/ಎಲ್ ಜಿ ಪಿ/2020 ದಿನಾಂಕ: 20-01-2020 ರಲ್ಲಿನ ನಿರ್ದೇಶನಗಳನ್ವಯ ತೆರವುಗೊಳಿಸಿ ಸಂರಕ್ಷಿಸಲಾಗುತ್ತಿದೆ.</td></tr>
</table>

Digitally signed by
SUNIL KUMAR P
Date: 02.06.2025
16:06:12

ಕಂದಾಯ ಆಯುಕ್ತರು,
ಕಂದಾಯ ಆಯುಕ್ತಾಲಯ,
ಬೆಂಗಳೂರು.